1

# ದೇವರ ರಾಜ್ಯ

*“ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯಕುಮಾರನ ರಾಜ್ಯದೊಳಗೆ ಸೇರಿಸಿದನು” (ಕೊಲೊಸ್ಸೆ 1:13).*

“ಸಮುದ್ರವು ಆನೆಗೆ ಈಜಾಡಲು ಸಾಕಷ್ಟು ಆಳವಾಗಿದೆ, ಆದರೆ ಅದರ ತೀರಗಳು ಒಂದು ಚಿಕ್ಕಮಗುವಿಗೆ ನೀರಿನಲ್ಲಿ ನಡೆದಾಡಲು ಸಾಕಷ್ಟು ಆಳವಲ್ಲದ್ದು ಆಗಿದೆ” ಎಂದು ಯಾರೋ ಒಬ್ಬರು ಹೇಳಿದ್ದಾರೆ. ಆದರೆ ಸಮುದ್ರಕ್ಕೆ ಅನೇಕ ಭಿನ್ನವಾದ ಗುಣಲಕ್ಷಣಗಳಿವೆ. ಅದಕ್ಕೆ ತೀರಗಳೂ ಆಳವಲ್ಲದ ನೀರುಗಳೂ ಇದೆ, ಆದಾಗ್ಯೂ ಅದಕ್ಕೆ ಪ್ರಚಂಡವಾದ ಆಳಗಳೂ, ಅಸ್ತವ್ಯಸ್ತವಾಗಿರುವ, ಅಗ್ರಾಹ್ಯವಾದ ಅಗಲವೂ ಇರುತ್ತದೆ.

ಹಾಗೆಯೇ, ಹೊಸ ಒಡಂಬಡಿಕೆಯ ಸಭೆಗೆ ಹಲವಾರು ಲಕ್ಷಣಗಳಿವೆ. ಕಾರ್ಯದ ಅದರ ಐಕ್ಯತೆಯನ್ನು ಮತ್ತು ಕ್ರಿಸ್ತನೊಂದಿಗೆ ನಮ್ಮ ಐಕ್ಯತೆಯನ್ನು ಕುರಿತು ನಾವು ಅವಲೋಕಿಸುವಾಗ, ನಾವು ಸಭೆಯನ್ನು ಕ್ರಿಸ್ತನ ದೇಹದಂತೆ ನೋಡುವೆವು (ರೋಮಾಪುರ 12:5). ಆತನ ಸಭೆಯಂತೆ ನಾವು ಸ್ವೀಕರಿಸುವ ಉತ್ಸಾಹ, ಸಹಾಯ, ಮತ್ತು ಜೊತೆಗಾರಿಕೆಯನ್ನು ನಾವು ಯೋಚಿಸುವಾಗ, ನಾವು ಅದನ್ನು ದೇವರ ಕುಟುಂಬ ಎಂದು ದೃಷ್ಟಿಸುತ್ತೇವೆ (ಎಫೆಸ 2:19). ದೇವರ ನಿಯಮ ಮತ್ತು ಆಳ್ವಿಕೆಯ ದೃಷ್ಟಿಕೋನದಿಂದ ನಾವು ಯೋಚಿಸುವಾಗ, ಅದನ್ನು ನಾವು ಭೂಲೋಕದಲ್ಲಿ ದೇವರ ರಾಜ್ಯದಂತೆ ಗುರುತಿಸುತ್ತೇವೆ (ಮತ್ತಾಯ 16:16-18).

ಈ ಭಿನ್ನವಾದ ವಿವರಣೆಗಳು ಒಂದಕ್ಕೊಂದು ವಿರೋಧವಾಗಿರುವದಿಲ್ಲ, ಆದರೆ ಎರಡೂ ಒಂದಾಗಿ ಸಭೆಯೆಂದು ನಾವು ಕರೆಯುವ (ಭಾಷಾಂತರದಿಂದ) ದೈವಿಕ ಸಂಘಟನೆಯ ರಚನೆಯ ಸ್ವಭಾವವನ್ನು ಉದಾಹರಿಸುತ್ತದೆ. ಹೊಸ ಒಡಂಬಡಿಕೆಯ ಸಭೆಯ ಮಹಿಮೆಯು ಕ್ರಿಸ್ತನು ಶಿಲುಬೆಯ ಮುಖಾಂತರ ಒದಗಿಸಿದ ಪರಿಶುದ್ಧ ಲಕ್ಷಣಗಳ ಸಮೂಹವು ಅದರಲ್ಲಿ ಒಳಗೊಂಡಿರುವುದಾಗಿದೆ.

ಪ್ರಶ್ನಾತೀತವಾಗಿ, ಪರಿಶುದ್ಧಾತ್ಮನು ಸಭೆಯನ್ನು ರಾಜ್ಯದಂತೆ ನಾವು ದೃಷ್ಟಿಸಬೇಕೆಂದು ಬಯಸುತ್ತಾನೆ. ಕ್ರಿಸ್ತನ ಕಡೆಗೆ ಮಾರ್ಪಡುವಿಕೆಯು ಅಂಧಕಾರದ ರಾಜ್ಯದಿಂದ ಕ್ರಿಸ್ತನ ರಾಜ್ಯದ ಕಡೆಗೆ ಬದಲಾಯಿಸಲ್ಪಡುವುದು ಎಂದು ಪೌಲನು ಹೇಳಿದ್ದಾನೆ: “ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು” (ಕೊಲೊಸ್ಸೆ 1:13). ಮಾರ್ಪಡುವಿಕೆಯು ಹೊಸ ಒಡಂಬಡಿಕೆಯಲ್ಲಿ ಬೇರೆ ಕಡೆಯಲ್ಲಿ ಕ್ರಿಸ್ತನ ದೇಹದೊಳಗೆ ಪ್ರವೇಶಿಸುವಂತೆ ವಿವರಿಸಲ್ಪಟ್ಟಿದ್ದರಿಂದ (ಉದಾಹರಣೆ ರೋಮಾಪುರ 6:3; ಗಲಾತ್ಯ 3:27) ಮತ್ತು ಕ್ರಿಸ್ತನ ದೇಹವು ಸಭೆಯಂತೆ ಹೇಳಲ್ಪಟ್ಟಿರುವದರಿಂದ (ಎಫೆಸ 1:21-23), ನಾವು ಸಭೆಯನ್ನು, ಕ್ರಿಸ್ತನ ದೇಹವನ್ನು, ಕ್ರಿಸ್ತನ ರಾಜ್ಯವನ್ನು (ಇಲ್ಲವೇ ದೇವರ ರಾಜ್ಯವನ್ನು) ಆತ್ಮಿಕ ಸಂಘಟನೆಯಂತೆ ನೋಡಬೇಕೆಂದು ಪರಿಶುದ್ಧಾತ್ಮನು ಬಯಸುತ್ತಾನೆಂಬುದಾಗುತ್ತದೆ.

"ರಾಜ್ಯ" ಎಂಬ ಪದವು ಕನಿಷ್ಟಪಕ್ಷ ಬೈಬಲಿನಲ್ಲಿ ಆರು ಸಂದರ್ಭಗಳಲ್ಲಿ ಉಪಯೋಗಿಸಲ್ಪಟ್ಟಿದೆ. (1) ಅದು ಭೂಲೋಕದ, ಪ್ರಾಪಂಚಿಕ, ಸರಕಾರದ ಆಡಳಿತಕ್ಕೆ ಸಂಬಂಧಿಸಿ ಉಪಯೋಗಿಸಲ್ಪಟ್ಟಿದೆ (ಮತ್ತಾಯ 4:8). (2) ಅದು ಹಳೇ ಮತ್ತು ಹೊಸ ಒಡಂಬಡಿಕೆಯಲ್ಲಿ "ದೇವರ ಆಳ್ವಿಕೆಯ" ತತ್ವವನ್ನು ಹೇಳಲು ಉಪಯೋಗಿಸಲ್ಪಟ್ಟಿದೆ. ದೇವರು ಇಸ್ರಾಯೇಲನ್ನು ತನ್ನ ಆಯ್ದುಕೊಂಡ ಜನಾಂಗವನ್ನಾಗಿ ಮಾಡಿಕೊಂಡಾಗ, ಅದನ್ನು ತನ್ನ ರಾಜ್ಯ ಎಂದು ಗುರುತಿಸಿಕೊಂಡನು (ವಿಮೋಚನಕಾಂಡ 19:5, 6). (3) ಅದು ದೇವರ ಆಳ್ವಿಕೆ ಅಥವಾ ಬಲವನ್ನು ಕುರಿತು ಉಪಯೋಗಿಸಲ್ಪಟ್ಟಿದೆ (ಮತ್ತಾಯ 12:28). ದೇವರ ಚಿತ್ತಕ್ಕೆ ವಿಧೇಯತೆ ಇರುವಲ್ಲಿ ದೇವರ ಆಳ್ವಿಕೆ ಅಥವಾ ದೇವರ ರಾಜ್ಯವು ಅಸ್ತಿತ್ವದಲ್ಲಿರುವುದು. (4) ಅದು ಪರಲೋಕದಲ್ಲಿ ದೇವರ ಆಳ್ವಿಕೆಯ ಬಗ್ಗೆ ಉಪಯೋಗಿಸಲ್ಪಟ್ಟಿದೆ. ಪೇತ್ರನು ನಮ್ಮನ್ನು ಕ್ರೈಸ್ತ ಸದ್ಗುಣಗಳಲ್ಲಿ ಬೆಳೆಯಬೇಕೆಂದು ಒತ್ತಾಯಿಸಿದಾಗ, ಅವನು ಪರಲೋಕವನ್ನು ನಮ್ಮ ಕರ್ತನ ನಿತ್ಯವಾದ ರಾಜ್ಯದಂತೆ ಉಲ್ಲೇಖಿಸಿದನು: "ಮತ್ತು ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ನಿತ್ಯರಾಜ್ಯದಲ್ಲಿ ಪ್ರವೇಶಿಸುವ ಹಾಗೆ ದೇವರು ನಿಮಗೆ ಧಾರಾಳವಾಗಿ ಅನುಗ್ರಹಿಸುವನು" (2 ಪೇತ್ರ 1:11). (5) ಅದು ಸಭೆಗೆ ಅನ್ವಯಿಸಲ್ಪಟ್ಟಿದೆ. ಸಭೆಯು ದೇವರ ಪರಲೋಕ ರಾಜ್ಯದ ತನ್ನ ಭೂಲೋಕದ ಪ್ರಕಟನೆಯಾಗಿರುತ್ತದೆ. ಆದುದರಿಂದ, ಪರಲೋಕ ರಾಜ್ಯ ಎಂದು ಉಲ್ಲೇಖಿಸಲ್ಪಟ್ಟಿದೆ (ಮತ್ತಾಯ 16:18, 19), ದೇವರ ರಾಜ್ಯ (ಯೋಹಾನ 3:5), ಮತ್ತು ಆತನ ಪ್ರಿಯ ಕುಮಾರನ ರಾಜ್ಯ (ಕೊಲೊಸ್ಸೆ 1:13) ಎಂದೂ ಉಲ್ಲೇಖಿಸಲ್ಪಟ್ಟಿದೆ. (6) ಈ ಪದವು ಸೈತಾನನ ರಾಜ್ಯಕ್ಕೂ ಉಪಯೋಗಿಸಲ್ಪಟ್ಟಿದೆ. ಆತನ ಬಲವು "ಸೈತಾನನ ರಾಜ್ಯ" ಎಂಬ ಪದದಿಂದಲೂ ತೋರಿಸಲ್ಪಟ್ಟಿದೆ (ಮತ್ತಾಯ 12:26).[1]

ದೇವರ ರಾಜ್ಯದಂತೆ ಸಭೆಯ ಮೇಲೆ ಪ್ರತಿಬಿಂಬಿಸುವುದು ಪ್ರೋತ್ಸಾಹದಾಯಕವಾದದ್ದೂ ಕುತೂಹಲ ಕೆರಳಿಸುವಂಥದ್ದೂ ಆಗಿರುತ್ತದೆ. ಪ್ರತ್ಯೇಕವಾಗಿ, ಕರ್ತನ ಭೂಲೋಕದ ರಾಜ್ಯದ, ಸಭೆಯ ಗಣಲಕ್ಷಣಗಳ ಮೇಲೆ ಕೇಂದ್ರೀಕರಿಸೋಣ.

## ಒಂದು ಆತ್ಮಿಕ ರಾಜ್ಯ

ಅದರ ಮೂಲ ಸ್ವಭಾವದಲ್ಲಿ, ಸಭೆಯು ಆತ್ಮಿಕ ರಾಜ್ಯವಾಗಿದೆ, ಪ್ರಾಪಂಚಿಕ ಅಥವಾ ಭೌತಿಕವಾದದ್ದಾಗಿರುವದಿಲ್ಲ. ಪಿಲಾತನು ಯೇಸುವಿಗೆ, "ನೀನು ಯೆಹೂದ್ಯರ ಅರಸನು ಹೌದೋ?" (ಯೋಹಾನ 18:33) ಎಂದು ಪ್ರಶ್ನಿಸಿದಾಗ ಯೇಸುವು ಹೀಗೆ ಹೇಳುವದರಿಂದ ಉತ್ತರಕೊಟ್ಟನು, "ನನ್ನ ರಾಜ್ಯವು ಈ ಲೋಕದ್ದಲ್ಲ; ನನ್ನ ರಾಜ್ಯವು ಈ ಲೋಕದ್ದಾಗಿದ್ದರೆ ನಾನು ಯೆಹೂದ್ಯರ ಕೈಯಲ್ಲಿ ಬೀಳದಂತೆ ನನ್ನ ಪರಿವಾರದವರು ಕಾದಾಡುತ್ತಿದ್ದರು; ಆದರೆ ನನ್ನ ರಾಜ್ಯವು ಇಲ್ಲಿಯದಲ್ಲ" (ಯೋಹಾನ 18:36).

ರಾಜ್ಯದ ಆತ್ಮಿಕ ಸ್ವಭಾವವು ಸಭೆಯನ್ನು ಕುರಿತು ಮಹತ್ವದ ಸತ್ಯಗಳನ್ನು ಪರಿಚಯಿಸುತ್ತದೆ. ಮೊದಲನೆಯದು, ಸಭೆಯ ಮುಖ್ಯ ಕಚೇರಿಗಳು ಭೂಲೋಕದಲ್ಲಿ ಇರುವುದಿಲ್ಲ ಆದರೆ ಪರಲೋಕದಲ್ಲಿ ಇರುತ್ತವೆ. ಕ್ರಿಸ್ತನು, ನಮ್ಮ ಸಾರ್ವಭೌಮ ಅರಸನು ಪರಲೋಕದಲ್ಲಿ ದೇವರ ಬಲಗಡೆಯಲ್ಲಿ ಕುಳಿತು ಕೊಂಡಿರುತ್ತಾನೆ (ಅಪೊಸ್ತಲರ ಕೃತ್ಯಗಳು 2:33). ಆತನು ಸಭೆಯ, ದೇವರ ಭೂಲೋಕದ ರಾಜ್ಯದ ಅರಸನಂತೆ, ಸಮಯದ ಅಂತ್ಯದ ವರೆಗೆ ಆಳಿಕೆ ಮಾಡುವನು, ಆ ಮೇಲೆ ಆತನು ದೇವರಿಗೆ, ತಂದೆಗೆ, ರಾಜ್ಯವನ್ನು ಒಪ್ಪಿಸಿಕೊಡುವನು (1 ಕೊರಿಂಥ 15:24). ಹೀಗೆ ಕ್ರೈಸ್ತರು

ಯೇಸುವಿನ ಒಡೆತನಕ್ಕೆ ಒಪ್ಪಿಸಿಕೊಳ್ಳುವದರಿಂದ ದೇವರ ಆಳ್ವಿಕೆಯಲ್ಲಿ ಪ್ರವೇಶಿಸಿದ ಜನರಾಗಿರುವರು (ಫಿಲಿಪ್ಪಿ 2:9-11).

ಎರಡನೆಯದು, ಕ್ರೈಸ್ತರ ಜೀವಿತಗಳು, ಕಾರ್ಯ ಮತ್ತು ಆರಾಧನೆಯು ಪ್ರಾಪಂಚಿಕವಾದದ್ದರ ಕೇಂದ್ರದಲ್ಲಿ ಅಲ್ಲ ಆದರೆ ಆತ್ಮಿಕವಾದ ಕೇಂದ್ರದಲ್ಲಿರುವುದು. ನಾವು ಆತ್ಮಿಕ ಯುದ್ಧವನ್ನು ಮಾಡುತ್ತೇವೆ (ಎಫೆಸ 6:12), ದೇವರಿಗೆ ಆತ್ಮಿಕ ಯಜ್ಞಗಳನ್ನು ಅರ್ಪಿಸುತ್ತೇವೆ (1 ಪೇತ್ರ 2:5), ಆತ್ಮಿಕ ಆಹಾರದ ಮೇಲೆ ಜೀವಿಸುತ್ತೇವೆ (ಇಬ್ರಿಯ 5:12-14) ಮತ್ತು ಪರಲೋಕದಲ್ಲಿ ತಮ್ಮ ನಾಗರಿಕತ್ವವಿರುವ ಪ್ರಯಾಣಿಕರಂತೆ ಈ ಲೋಕದಲ್ಲಿ ಜೀವಿಸುತ್ತೇವೆ (ಫಿಲಿಪ್ಪಿ 3:20; 1 ಪೇತ್ರ 2:11).

ಮೂರನೆಯದು, ಈ ಆತ್ಮಿಕ ರಾಜ್ಯದ ಸದಸ್ಯರಂತೆ, ಈ ಜಗತ್ತಿನ ಭೌತಿಕ ವಾಸ್ತವಿಕತೆಗಳೊಂದಿಗೆ ನಮ್ಮ ಸಂಬಂಧಗಳು ಪರಲೋಕದ ರಾಜ್ಯದಲ್ಲಿ ನಮ್ಮ ಆತ್ಮಿಕ ನಾಗರಿಕತ್ವದಿಂದ ನಡೆಸಲ್ಪಡುವವು. ನಿತ್ಯತ್ವದ ಕನ್ನಡಕದ ಮುಖಾಂತರ ದೃಷ್ಟಿಸಿ ನೋಡುವಾಗ ಈ ಜೀವನದ ಹೊಳಪುಗಳ ಬೆಲೆಯಿಲ್ಲದಿರುವಿಕೆಯನ್ನು ನೋಡುವೆವು.

ಒಬ್ಬ ಕ್ರೈಸ್ತನ ಹಾಗೂ ಸೈತಾನನ ಮಧ್ಯದಲ್ಲಿ ಒಂದು ಕಾಲ್ಪನಿಕ ಚರ್ಚೆಯನ್ನು ಸೂಚಿಸಿರುವರು "ಕ್ರೈಸ್ತನೇ, ನಿನಗೆ ನಾನು ಪ್ರತಿಯೊಂದನ್ನೂ ಕೊಡುವೆನು. ಮನೆಗಳನ್ನು ಭೂಮಿಯನ್ನು ಮತ್ತು ಹಣವನ್ನು ಕೊಡುವೆನು" ಎಂದು ಸೈತಾನನು ಹೇಳುವನು, "ನನಗೆ ಎಲ್ಲವೂ ಇದೆ. ನನ್ನ ತಂದೆಯು ಜಗತ್ತನ್ನೂ ಅದರಲ್ಲಿ ಇರುವದೆಲ್ಲವನ್ನೂ ಹೊಂದಿಕೊಂಡಿದ್ದಾನೆ. ನನಗೆ ಎಲ್ಲವೂ ಇರುವದರಿಂದ ನೀನು ನನಗೆ ಯಾವುದನ್ನೂ ಕೊಡಲಾರೆ" ಎಂದು ಹೇಳಿ ಕ್ರೈಸ್ತನು ಉತ್ತರ ಕೊಡುವನು. "ನಾನು ನಿನ್ನಿಂದ ಎಲ್ಲವನ್ನೂ ತೆಗೆದುಕೊಳ್ಳುವೆನು. ನಿನ್ನ ಮನೆಯನ್ನು, ನಿನ್ನ ಆನಂದವನ್ನೂ ಮತ್ತು ನಿನ್ನ ಹಣವನ್ನು ನಾನು ತೆಗೆದುಕೊಳ್ಳುವೆನು" ಎಂದು ಸೈತಾನನು ಪುನಃ ಪ್ರಯತ್ನಿಸುವನು "ನೀನು ನನ್ನಿಂದ ಏನನ್ನೂ ತೆಗೆದುಕೊಳ್ಳಲಾರೆ. ನನ್ನಲ್ಲಿ ಏನೂ ಇರುವದಿಲ್ಲ. ನನಗಿದ್ದದ್ದೆಲ್ಲವೂ ದೇವರಿಗೆ ಕೊಡಲ್ಪಟ್ಟಿದೆ. ನಾನು ಆತನ ಆತ್ಮಿಕ ರಾಜ್ಯಕ್ಕೆ ಸೇರಿದವನಾಗಿದ್ದೇನೆ, ಆದುದರಿಂದ ನನ್ನ ನಿಜವಾದ ಮೌಲ್ಯಗಳು ಸ್ವಭಾವದಲ್ಲಿ ಆತ್ಮಿಕವಾದವುಗಳಾಗಿವೆ" ಎಂದು ಕ್ರೈಸ್ತನು ಉತ್ತರಕೊಟ್ಟನು. "ನಾನು ನಿನ್ನನ್ನು ಕೊಲ್ಲುವೆನು. ನಾನು ನಿನ್ನ ಜೀವವನ್ನು ತೆಗೆದು ಹಾಕುವೆನು" ಎಂದು ಸೈತಾನನು ಇನ್ನೊಂದು ಸಲ ಪ್ರಯತ್ನಿಸಿದನು. "ನನಗೆ ಜೀವಿಸುವುದು ಕ್ರಿಸ್ತನೇ ಮತ್ತು ಸಾಯುವುದು ಲಾಭವೇ" ಎಂದು ಕ್ರೈಸ್ತನು ಹೇಳಿದನು. ಸೈತಾನನು ಒಂದು ಅಂತಿಮ ಪ್ರಯತ್ನ ಮಾಡಿದನು: "ನಿನ್ನನ್ನು ದುಃಖದಲ್ಲಿ ಜೀವಿಸುವಂತೆ ಮಾಡುವೆನು. ಪಾಪಿಗಳು ಮಾಡುತ್ತಿರುವ ಎಲ್ಲಾ ಆನಂದಕರವಾದ ಸಂಗತಿಗಳ ಕಡೆಗೆ ನೀನು ನೋಡುವಿ, ನೀನು ಅವುಗಳನ್ನು ಮಾಡಲು ಶಕ್ತಿಯುಳ್ಳವನಾಗಿರುವದಿಲ್ಲ. ನೀನು ಅಸಂತೃಪ್ತಿಯಲ್ಲಿ ಜೀವಿಸುವಿ." ಅದಕ್ಕೆ ಕ್ರೈಸ್ತನು "ನನ್ನ ಅಂತ್ಯಂತ ಉನ್ನತ ಆನಂದವು ಯೇಸುವಿನ ಚಿತ್ತವನ್ನು ಮಾಡುವುದಾಗಿದೆ" ಎಂದು ಘೋಷಿಸಿದನು. ದೇವರ ಆತ್ಮಿಕ ರಾಜ್ಯದ ಸದಸ್ಯನಾಗಿರುವುದು ಈ ಜಗತ್ತನ್ನೂ ಮತ್ತು ಅದರ ಎಲ್ಲಾ ಶೋಧನೆಗಳನ್ನೂ ಭಿನ್ನವಾದ ಬೆಳಕಿನಲ್ಲಿ ಇಡುವುದು. "ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತವೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು" (1 ಯೋಹಾನ 2:17) ಎಂದು ಯೋಹಾನನೊಂದಿಗೆ ಹೇಳಲು ಅದು ನಮಗೆ ಸಹಾಯ ಮಾಡುವುದು.

ಪರಲೋಕ ರಾಜ್ಯದ ಪ್ರಜೆಗಳು ಈ ಜಗತ್ತನ್ನು ಜಗತ್ತಿನ ಜನರು ನೋಡುವಂತೆ ದೃಷ್ಟಿಸುವದಿಲ್ಲ. ಈ ಜಗತ್ತಿಗೆ ಒಳಪಟ್ಟವರು ಮಾತ್ರವೇ ತಮ್ಮ ಸ್ವಾಸ್ಥ್ಯದ ಬಗ್ಗೆ, ತಮ್ಮ ವರ್ತಮಾನ ಕಾಲದ ಬಗ್ಗೆ ಮತ್ತು ಭವಿಷ್ಯದ ಬಗ್ಗೆ, ಮತ್ತು ಜಗತ್ತಿನ ವ್ಯವಹಾರಗಳ ಬಗ್ಗೆ ಚಿಂತಿಸುವರು. ಕ್ರೈಸ್ತರು ಈ *ಲೋಕದಲ್ಲಿ ಇರುವರು,* ಆದರೆ ನಾವು *ಅದಕ್ಕೆ*

*ಒಳಪಟ್ಟವರಲ್ಲ*. ನಾವು ಆತ್ಮಿಕ ರಾಜ್ಯಕ್ಕೆ ಒಳಪಟ್ಟಿರುತ್ತೇವೆ, ಈ ಪ್ರಾಪಂಚಕ್ಕೆ ಅಲ್ಲ. ನಮ್ಮ ಭಕ್ತಿಯು ಆತ್ಮಿಕವಾದದ್ದು ಆದರೆ ಲೌಕಿಕವಾದದ್ದಲ್ಲ. ರೋಗಿಗಳಿಗೆ ಸೇವೆ ಮಾಡುವಾಗ, ಹಸಿದವರಿಗೆ ಉಣ್ಣಿಸುವಾಗ, ಜಗತ್ತನ್ನು ಜೀವಿಸಲು ಉತ್ತಮ ಸ್ಥಳವನ್ನಾಗಿ ಮಾಡಲು ಕಾರ್ಯಮಾಡುವಾಗ, ನಮ್ಮ ಹೃದಯಗಳ ನಿಜವಾದ ಚಿಂತನೆಗಳು ನಿತ್ಯವಾದವುಗಳಾಗಿವೆ. ಇತರ ಎಲ್ಲಾ ಆಸಕ್ತಿಗಳಿಗಿಂತ ಹೆಚ್ಚಾಗಿ ನಾವು ಸಂದರ್ಶಿಸುವ ಪ್ರತಿಯೊಬ್ಬ ವ್ಯಕ್ತಿಯ ಆತ್ಮಿಕ ರಕ್ಷಣೆಗಾಗಿ ಮುಂದುವರಿಯುತ್ತೇವೆ. ನಾವು ಆತ್ಮಿಕ ಗುರಿಗಳಿಗಾಗಿ ಜೀವಿಸುತ್ತೇವೆ, ಆದರೆ ಲೌಕಿಕವಾದವುಗಳ ಬಗ್ಗೆ ಅಲ್ಲ. ಈ ಲೋಕದ ಪುರುಷರು ಹೊಸ ಉಡುಪುಗಳನ್ನು ಮಾರುವರು; ಕ್ರೈಸ್ತರು ಹೊಸ ಆತ್ಮಗಳಿಗಾಗಿ ಹುಡುಕುವರು.

## ಒಂದು ನೀತಿಯ ರಾಜ್ಯ

ಎರಡನೆಯದು, ಸಭೆಯು ನೀತಿಯ ರಾಜ್ಯವಾಗಿದೆ. ಪರಲೋಕ ರಾಜ್ಯದ ಪ್ರಜೆಗಳು ರಾಜ್ಯವನ್ನು ಪ್ರವೇಶಿಸುವದಕ್ಕಿಂತ ಮೊದಲು, ಮೊದಲು ಅವರು ಜೀವಿಸಿದ್ದಂತೆ ಜೀವಿಸುವದಿಲ್ಲ, ರಾಜ್ಯದ ಮಕ್ಕಳು ಬೆಳಕಿನ ಮಕ್ಕಳಾಗಿರುವರೆಂದು ಪೌಲನು ಹೇಳಿದನು: "ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದಿರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ. ಬೆಳಕಿನ ಫಲವು ಉಪಕಾರದಲ್ಲಿಯೂ ನೀತಿಯಲ್ಲಿಯೂ ಸತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ. ಕರ್ತನಿಗೆ ಮೆಚ್ಚಿಗೆಯಾದದ್ದು ಏನೆಂಬದನ್ನು ಪರಿಶೋಧಿಸಿ ತಿಳುಕೊಳ್ಳಿರಿ" (ಎಫೆಸ 5:8-10). "ಯಾಕಂದರೆ ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪರಿಶುದ್ಧಾತ್ಮನಿಂದಾಗುವ ಆನಂದವೂ ಆಗಿದೆ" (ರೋಮಾಪುರ 14:17) ಎಂದೂ ಹೇಳಿದನು.

ಹೊಸ ಒಡಂಬಡಿಕೆಯು ನೀತಿಯ ಎರಡು ರೀತಿಗಳ ಬಗ್ಗೆ ಮಾತಾಡುತ್ತದೆ. ಒಂದು *ವಿಸ್ತರಿಸಲ್ಪಟ್ಟ ನೀತಿ,* ಅದರ ಬಗ್ಗೆ ಪ್ರೇರಿತ ಬರಹಗಾರರಿಂದ ಆಗಾಗ ಮಾತಾಡಲ್ಪಟ್ಟಿದೆ. ನಾವು ಕ್ರೈಸ್ತರಾಗುವಾಗ, ಈ ನೀತಿಯು ನಮ್ಮ ಮೇಲೆ ಅನುಗ್ರಹಿಸಲ್ಪಡುತ್ತದೆ ಮತ್ತು ನಾವು ದೇವರ ಮುಂದೆ ನೀತಿವಂತರಾಗಿ ನಿರ್ಣಯಿಸಲ್ಪಡುತ್ತೇವೆ. ಕ್ರಿಸ್ತನಿಗಾಗಿ ಬದಲಾವಣೆ ಹೊಂದುವದರಲ್ಲಿ, ನಾವು "ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ನೀತಿವಂತರೆಂದು ನಿರ್ಣಯಿಸಲ್ಪಡುವೆವು" (ರೋಮಾಪುರ 3:24).

ಹೊಸ ಒಡಂಬಡಿಕೆಯು *ಪ್ರದರ್ಶಿಸಲ್ಪಟ್ಟ ನೀತಿಯನ್ನು* ಉಲ್ಲೇಖಿಸುತ್ತದೆ. ಕ್ರೈಸ್ತರು ನೀತಿಯಲ್ಲಿ ನಡೆಯಬೇಕು ಇಲ್ಲವೇ ಕ್ರಮವಾಗಿ ಪ್ರದರ್ಶಿಸಬೇಕು. "... ಕ್ರಿಸ್ತನು ಹೇಗೆ ನೀತಿವಂತನಾಗಿದ್ದಾನೋ ಹಾಗೆಯೇ ನೀತಿಯನ್ನನುಸರಿಸುವವನು ನೀತಿವಂತನಾಗಿದ್ದಾನೆ" (1 ಯೋಹಾನ 3:7). ಪಾಪದಲ್ಲಿ "ಜೀವಿಸುವುದು" ಇಲ್ಲವೇ "ನಡೆಯುವುದು" ಕ್ರೈಸ್ತರಿಗೆ ಯೋಚಿಸಲು ಅಸಾಧ್ಯವಾದದ್ದಾಗಿದೆ. "ಪಾಪ ಮಾಡುವವನು ಸೈತಾನನಿಂದ ಹುಟ್ಟಿದವನಾಗಿದ್ದಾನೆ; ... ದೇವರಿಂದ ಹುಟ್ಟಿದವನು ಪಾಪ ಮಾಡನು ..." (1 ಯೋಹಾನ 3:8, 9). ಆದುದರಿಂದ ದೇವರ ರಾಜ್ಯವು ನೀತಿಯ ರಾಜ್ಯವಾಗಿದೆ; ಅದರಲ್ಲಿ ಪ್ರವೇಶಿಸುವವರಿಗೆ ನೀತಿಯು ವಿಸ್ತರಿಸಲ್ಪಡುತ್ತದೆ, ಮತ್ತು ಅದರ ನಿಜವಾದ ನಾಗರಿಕರಂತೆ ಜೀವಿಸುವವರಿಂದ ನೀತಿಯು ಪ್ರದರ್ಶಿಸಲ್ಪಡುತ್ತದೆ.

ಹೃದಯದಲ್ಲಿ ದೇವರ ನಿಯಮ ಮತ್ತು ಆಳ್ವಿಕೆಯು ಜೀವನದಲ್ಲಿಯ ನೀತಿಯಲ್ಲಿ ತಾನೇ ಪ್ರಕಟವಾಗುತ್ತದೆ. ಯು.ಎಸ್.ನಲ್ಲಿ 1930ರಲ್ಲಿ ಗ್ರೇಟ್ ಡಿಪ್ರೆಶ್ಯನ್‌ದ

ಸಮಯದಲ್ಲಿ ಜೀವಿಸಿದ ಒಬ್ಬ ಮನುಷ್ಯನ ಬಗ್ಗೆ ಕಥೆಯು ಹೇಳಲ್ಪಟ್ಟಿದೆ. ಅಂಥ ಪರಿಸ್ಥಿತಿಯಿಂದ ಯಾವ ಪರಿಣಾಮಹೊಂದದ ಸಭೆಯ ಸದಸ್ಯನು ಅವನಾಗಿದ್ದನು. ಇತರರು ಬಡತನದಲ್ಲಿ ಕಷ್ಟಪಡುತ್ತಿದ್ದಾಗ, ಅವನು ಸುಖಭೋಗದಲ್ಲಿ ಜೀವಿಸಿದನು. ಹೀಗಿದ್ದರೂ, ಭಾನುವಾರ ಪ್ರಾಥಃಕ್ಕಾಲಗಳಲ್ಲಿ, ಕಾಣಿಕೆ ಚೀಲ ಅವನ ಮುಂದೆ ಹೋಗುವಾಗ, ಅವನು ಅದರಲ್ಲಿ ಒಂದು ಚಿಕ್ಕ ನಾಣ್ಯವನ್ನು ಹಾಕುತ್ತಿದ್ದನು. ಆ ದಿನಗಳಲ್ಲಿ ಜಗತ್ತಿನಲ್ಲಿ ಕ್ರಿಸ್ತನ ಕಾರ್ಯ ಮಾಡಲು ಸಭೆಗೆ ಹಣದ ಅತ್ಯವಶ್ಯಕತೆಯಿತ್ತು, ಆದರೆ ಅವನು ಸತತವಾಗಿ ಒಂದೇ ಚಿಕ್ಕ ನಾಣ್ಯವನ್ನು ಕೊಡುತ್ತಿದ್ದನು. ಸಹಜವಾಗಿ ಅವನು ರಾಜ್ಯದಲ್ಲಿದ್ದನು, ಆದರೆ ರಾಜ್ಯವು ಅವನಲ್ಲಿರಲಿಲ್ಲ.

ನಮ್ಮ ಹೃದಯಗಳ ಮೇಲೆ ದೇವರು ನಡಿಸುವಾಗ ಮತ್ತು ಆಳುವಾಗ, ನಾವು ದೇವರ ರಾಜ್ಯದ ನಿಜವಾದ ನಾಗರೀಕರಾಗಿರುವೆವು. ದೇವರ ರಾಜ್ಯವು ನೀತಿಯ ರಾಜ್ಯವಾಗಿರುವುದು. ಈ ರಾಜ್ಯದಲ್ಲಿ ನಾಗರಿಕತ್ವವು ಅಂದರೆ ದೇವರ ಸಾರ್ವಭೌಮತೆಯನ್ನು ಗುರುತಿಸುವುದು ಮತ್ತು ನಮ್ಮ ಅನುದಿನದ ಜೀವನಗಳಲ್ಲಿ ಆತನಿಗೆ ಸಮರ್ಪಿಸುವುದು ಆಗಿದೆ.

## ಒಂದು ನಿತ್ಯವಾದ ರಾಜ್ಯ

ಮೂರನೆಯದು, ಸಭೆಯು ಭೂಲೋಕದ ಮೇಲೆ ದೇವರ ನಿತ್ಯರಾಜ್ಯವಾಗಿದೆ. ಅದು ದಾಟಿಹೋಗುವಂಥದ್ದು ಅಥವಾ ತಾತ್ಕಾಲಿಕವಾದದ್ದು ಆಗಿರುವದಿಲ್ಲ; ಅದು ಸ್ಥಿರವಾದದ್ದೂ, ಅಲ್ಲಾಡಿಸಲ್ಪಡಲಾರದ್ದೂ, ನಿತ್ಯವಾದದ್ದೂ ಆಗಿದೆ.

ಎಂದೂ ನಾಶಪಡಿಸಲ್ಪಡದ ರಾಜ್ಯವನ್ನು ಪರಲೋಕದ ದೇವರು ಸ್ಥಾಪಿಸುವನು ಎಂದು ದಾನಿಯೇಲನು ಪ್ರವಾದಿಸಿದನು (ದಾನಿಯೇಲ 2:44). ಗಬ್ರಿಯೇಲನು ಮರಿಯಳಿಗೆ, ಆಕೆಯು ಮೆಸ್ಸೀಯನ ಭೂಲೋಕದ ತಾಯಿಯಾಗುವಳು ಎಂದು ಪ್ರಕಟಿಸಿದಾಗ, ಮೆಸ್ಸೀಯನು ಆಳುವ ರಾಜ್ಯದ ಗುಣವು ನಿತ್ಯವಾದದ್ದಾಗಿರುವುದೆಂದು ಹೇಳಿದನು: "ಆತನು ಮಹಾ ಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು. ಆತನು ಯಾಕೋಬನ ವಂಶವನ್ನು ಸದಾಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ" (ಲೂಕ 1:32, 33). ಯೇಸುವು ತನ್ನ ಸಭೆಯನ್ನು ಸ್ಥಾಪಿಸುವ ತನ್ನ ಉದ್ದೇಶವನ್ನು ಪ್ರಕಟಿಸಿದಾಗ, ಆತನು ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು ಎಂದು ಹೇಳಿದನು (ಮತ್ತಾಯ 16:18). ದೇವರ ರಾಜ್ಯವು ಇಬ್ರಿಯ 12:28ರಲ್ಲಿ ಅಲ್ಲಾಡಿಸಲ್ಪಡದಂಥ ರಾಜ್ಯದಂತೆ ವಿವರಿಸಲ್ಪಟ್ಟಿದೆ.

ಪರಲೋಕ ರಾಜ್ಯದ ಪ್ರಜೆಗಳಂತೆ, ಕ್ರೈಸ್ತರು ನಿತ್ಯಜೀವವನ್ನು ಹೊಂದಿಕೊಂಡಿದ್ದಾರೆ. ಈ ಜೀವವು ಈಗ *ಒಂದು ಅನುಭವವೂ* ಮತ್ತು *ಭವಿಷ್ಯಕ್ಕಾಗಿ ಒಂದು ನಿರೀಕ್ಷಣೆಯೂ* ಎರಡೂ ಆಗಿದೆ. ಯೇಸುವನ್ನು ಹೊಂದಿಕೊಂಡಿರುವವರೆಲ್ಲರಿಗೂ ಈಗ ನಿತ್ಯ ಜೀವವಿರುವುದು, ಯಾಕಂದರೆ ಆತನು ನಿತ್ಯಜೀವದ ಪ್ರತಿರೂಪವಾಗಿದ್ದಾನೆ (1 ಯೋಹಾನ 1:2). ಆದುದರಿಂದ, ಯೋಹಾನನು, "ತನ್ನ ಸಹೋದರರನ್ನು ದ್ವೇಷಿಸುವವನು ಕೊಲೆಗಾರನಾಗಿದ್ದಾನೆ, ಮತ್ತು ಯಾವ ಕೊಲೆಗಾರನಲ್ಲಿಯೂ ನಿತ್ಯ ಜೀವವು *ಇರುವದಿಲ್ಲ*" (1 ಯೋಹಾನ 3:15; ಒತ್ತಿ ಹೇಳಿದ್ದು ನನ್ನದು) ಎಂದು ಬರೆದನು. ದೇವರ ರಾಜ್ಯದ ನಿತ್ಯ ಸ್ವಭಾವವು ಕ್ರೈಸ್ತರಾಗಿ ಈಗ ನಾವು ಅನುಭವಿಸುವ ಜೀವನದ

ಗುಣಮಟ್ಟದಲ್ಲಿ ಮತ್ತು ನಿತ್ಯತ್ವದಲ್ಲಿ ನಾವು ಸ್ವೀಕರಿಸಲು ನಿರೀಕ್ಷಿಸುವ ನಿತ್ಯಜೀವದಲ್ಲಿಯೂ ತನ್ನನ್ನು ವ್ಯಕ್ತಪಡಿಸಿಕೊಳ್ಳುತ್ತದೆ.

ನಿತ್ಯಜೀವದಲ್ಲಿ ನಮ್ಮ ಪ್ರವೇಶವು ಶಿಶುವು ತನ್ನ ತಾಯಿಯ ಗರ್ಭದಿಂದ ಲೋಕದೊಳಗೆ ಪ್ರವೇಶಿಸುವದಕ್ಕೆ ಹೋಲಿಸಲ್ಪಟ್ಟಿದೆ. ಶಿಶುವು ಗರ್ಭದೊಳಗಿನ ವಾತಾವರಣದಲ್ಲಿ ಜೀವವನ್ನು ಅನುಭವಿಸುತ್ತದೆ. ಅದು ವಿಶ್ರಾಮದ, ಒದಗಿಸುವಿಕೆಯ ಹಾಗೂ ಸಂರಕ್ಷಣೆಯ ಜೀವನವಾಗಿದ್ದರೂ, ಜೀವನದ ಅದರ ಅನುಭವವು ಮಿತಿಯುಳ್ಳದ್ದಾಗಿರುವುದು. ಜನ್ಮತಾಳುವಾಗ ಶಿಶುವು ಜೀವವನ್ನು ಅನುಭವಿಸುವುದನ್ನು ಮುಂದುವರಿಸುವುದು. ಅದು ಭಿನ್ನವಾದ ಮತ್ತು ಪೂರ್ಣವಾದ ರೂಪದಲ್ಲಿ ಜೀವನವಾಗಿರುವುದು - ಅನ್ಯೋನ್ಯತೆಯ, ಬೆಳವಣಿಗೆಯ, ಮತ್ತು ಚಟುವಟಿಕೆಯ ಅಂತ್ಯವಿಲ್ಲದ ಸಾಧ್ಯತೆಗಳೊಂದಿಗಿನ ಜೀವನವಾಗಿರುವುದು. ಈಗ ಯೇಸುವು ನಮ್ಮ ಹೃದಯದಲ್ಲಿ ಜೀವಿಸುವಂತೆ, ಜೀವನದ ಹೊಸದಾದ ಮತ್ತು ಅದ್ಭುತಕರವಾದ ಗುಣವನ್ನು - ನಿತ್ಯಜೀವವನ್ನು ಆತನು ಒದಗಿಸುತ್ತಾನೆ; ಆದರೆ ನಾವು ಜೀವನದ ಇನ್ನೊಂದು ಭಾಗಕ್ಕೆ ದಾಟಿ ಹೋಗುವಾಗ, ಈ ನಿತ್ಯಜೀವವು ತನ್ನನ್ನು ಭಿನ್ನವಾದ ಮತ್ತು ಪೂರ್ಣವಾದ ರೂಪದಲ್ಲಿ - ಪರಲೋಕದ ಅನ್ಯೋನ್ಯತೆಯೊಂದಿಗೆ, ವ್ಯಕ್ತಪಡಿಸಲಾಗದ ಆನಂದದಲ್ಲಿ, ಮತ್ತು ನಿತ್ಯ ಸೇವೆಯಲ್ಲಿ ವ್ಯಕ್ತಪಡಿಸಲ್ಪಡುವುದು.

ಕ್ರೈಸರು ಸಮಯದಿಂದ ಇಲ್ಲವೇ ಪ್ರಾಪಂಚಿಕ ವಿಷಯಗಳಿಂದ ಪರಿಣಾಮಗೊಳ್ಳದ ನಿತ್ಯರಾಜ್ಯದ ಭಾಗವಾಗಿರುವರು. ಆತನ ವಾಕ್ಯಕ್ಕೆ ನಂಬಿಗಸ್ತಿಕೆಯಿಂದ ದೇವರ ಕಾಪಾಡುವಿಕೆಯಲ್ಲಿ ನಾವು ಇರುವವರೆಗೆ, ನಾಶಪಡಿಸಲ್ಪಡದ ಮತ್ತು ಎಂದೂ ಮುಗಿಯದ ರಾಜ್ಯದ ಭಾಗವಾಗಿ ನಾವು ಇರುವೆವು.

## ಮುಕ್ತಾಯ

ಕ್ರೈಸ್ತನ ಹೃದಯದಲ್ಲಿ ನಮ್ಮ ಶಿಫಾರಸಿನಂತೆ, ದೇವರ ನಿಯಮ ಮತ್ತು ಆಳ್ವಿಕೆಯನ್ನು ಉಪಯೋಗಿಸುವದರಿಂದ, ಹೊಸ ಒಡಂಬಡಿಕೆಯ ಸಭೆಯು, ಆತ್ಮಿಕತೆಯ, ನೀತಿಯ ಮತ್ತು ನಿತ್ಯತ್ವದ ಗುಣಗಳನ್ನು ಹೊಂದಿಕೊಂಡು ದೇವರ ರಾಜ್ಯವಾಗಿರುತ್ತದೆ. ಅದರ ಪ್ರಜೆಗಳು ಈ ಜಗತ್ತಿನಲ್ಲಿ ವಾಸಿಸುವರು, ಆದರೆ ಅವರ ಹೃದಯಗಳು ಮತ್ತು ನಾಗರಿಕತ್ವವು ಇನ್ನೊಂದು ಜಗತ್ತಿಗೆ ಒಳಪಟ್ಟಿರುವವು, ಅದು ದೇವರ ನಿತ್ಯರಾಜ್ಯವಾಗಿರುವುದು (ಕೊಲೊಸ್ಸೆ 3:1, 2; ಫಿಲಿಪ್ಪಿ 3:20).

ಯೆಹೂದ್ಯರ ನಾಯಕನಾದ, ನಿಕೊದೇಮನು, ದೇವರ ರಾಜ್ಯದ ಬಗ್ಗೆ ಹೆಚ್ಚು ತಿಳಿಯಲು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದನು. ಯೇಸುವು ಅವನಿಗೆ ಜನನದಂತೆ ಅತ್ಯುತ್ತಮವಾಗಿ ವಿವರಿಸಲ್ಪಡುವ ರೀತಿಯಲ್ಲಿ ಆಮೂಲಾಗ್ರವಾದ ಮತ್ತು ಬದಲಾವಣೆಗೊಳ್ಳುವ ಬದಲಾವಣೆಯಿಂದ ಮಾತ್ರವೇ ದೇವರ ರಾಜ್ಯವು ಪ್ರವೇಶಿಸಲ್ಪಡಬಹುದು ಎಂದು ಹೇಳಿದನು. "ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು" (ಯೋಹಾನ 3:5) ಎಂದು ಆತನು ಹೇಳಿದನು. ದೇವರ ರಾಜ್ಯವು ಅದರ ಅಧಿಕೃತ ಇಹಲೋಕದ ಪ್ರಾರಂಭದಲ್ಲಿ ಪ್ರವೇಶಿಸುವ ದಿನದಂದು, ಪೇತ್ರನು ಜನಸಮೂಹಕ್ಕೆ ಯೇಸುವಿನಲ್ಲಿ ಅವರ ನಂಬಿಕೆಯ ಬೆಳಕಿನಲ್ಲಿ, ಮಾನಸಾಂತರಪಡಲು ಮತ್ತು ತಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಲು ಬೋಧಿಸಿದನು (ಅಪೊಸ್ತಲರ ಕೃತ್ಯಗಳು 2:38-41). ಯೋಹಾನ 3ರಲ್ಲಿ ಯೇಸುವು ನಿಕೊದೇಮನಿಗೆ ವಿವರಿಸಿದ ನೂತನ ಜನನವು ಪೇತ್ರನಿಂದ ಅಪೊಸ್ತಲರ ಕೃತ್ಯಗಳು

2ರಲ್ಲಿ ಆಚರಿಸಲ್ಪಟ್ಟಿತು. ದೇವರ ರಾಜ್ಯದಲ್ಲಿ ಪ್ರವೇಶ ಅಥವಾ ಜನನವು ಅಥವಾ ಸಭೆಯು ಯೇಸುವಿನಲ್ಲಿ ನಂಬಿಕೆಯನ್ನು (ಯೋಹಾನ 3:16), ಮಾನಸಾಂತರ ಇಲ್ಲವೇ ಪಾಪದಿಂದ ದೇವರ ಕಡೆಗೆ ತಿರುಗುವದನ್ನು (ಅಪೊಸ್ತಲರ ಕೃತ್ಯಗಳು 17:30), ದೇವರ ಕುಮಾರನೆಂದು ಯೇಸುವನ್ನು ಒಪ್ಪಿಕೊಳ್ಳುವದನ್ನು (ರೋಮಾಪುರ 10:9, 10), ಮತ್ತು ಪಾಪಗಳ ಪರಿಹಾರಕ್ಕಾಗಿ ಕ್ರಿಸ್ತನಲ್ಲಿ ಬಾಪ್ತಿಸ್ಮವನ್ನು (ಅಪೊಸ್ತಲರ ಕೃತ್ಯಗಳು 2:38; 22:16) ಒಳಗೊಂಡಿರುತ್ತದೆ.

ದೇವರ ರಾಜ್ಯದಲ್ಲಿಯ ನಾಗರಿಕತ್ವವು ಜೀವನಕ್ಕೆ ಆತ್ಮಿಕ ಕೇಂದ್ರವನ್ನು, ದೇವರ ಆಳುವಿಕೆಯನ್ನು ತರುತ್ತದೆ, ಇದು ಜೀವನದ ಎಲ್ಲಾ ಭಾಗಗಳನ್ನು ಹೊಳೆಯುವಂತೆ ಮಾಡುತ್ತದೆ, ಸ್ಥಿರತೆಯನ್ನು, ಮಾರ್ಗದರ್ಶನವನ್ನು, ತಿಳುವಳಿಕೆಯನ್ನು ಮತ್ತು ಪರಿಪೂರ್ಣತೆಯನ್ನು ಒದಗಿಸುತ್ತದೆ. ಈ ಪರಿಶುದ್ಧ ನಾಗರಿಕತ್ವವು ನೀತಿಯನ್ನೂ, ಒಳ್ಳೆಯತನವನ್ನೂ, ಮತ್ತು ಸಮಾಧಾನವನ್ನೂ ನಮ್ಮ ಜೀವಿತದೊಳಗೆ ತರುವುದು. ತಾತ್ಕಾಲಿಕವಾದ ಈ ಜಗತ್ತಿನಲ್ಲಿ, ದೇವರ ರಾಜ್ಯವು ಇಂದಿಗಾಗಿ ಮತ್ತು ನಮ್ಮ ಎಲ್ಲಾ ನಾಳೆಗಳಿಗಾಗಿ ನಮ್ಮ ಜೀವಿತಗಳಲ್ಲಿ ನಿತ್ಯಜೀವವನ್ನು ತುಂಬಿಸುವುದು.

ದೇವರ ನಿತ್ಯ ರಾಜ್ಯವಾದ, "ಸಭೆಯ" ನಾಗರಿಕನು ನೀನಾಗಿರುವಿಯೋ?

---

ಟಿಪ್ಪಣಿ

[1]*What Is "the Church"?* ಎಂಬ ಪುಸ್ತಕದಲ್ಲಿ ಅನುಬಂಧ 2ರಲ್ಲಿ ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಿದ "ರಾಜ್ಯ" ಮತ್ತು "ರಾಜ್ಯಗಳು" ಎಂಬ ಪದಗಳ ಎಲ್ಲಾ ಉಲ್ಲೇಖಗಳನ್ನು ಕೂಡಿಸಲಾಗಿದೆ. ಹೊಸ ಒಡಂಬಡಿಕೆಯು ಈ ಪದಗಳನ್ನು ಹೇಗೆ ಉಪಯೋಗಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವದಕ್ಕೆ ಈ ಉಲ್ಲೇಖಗಳು ಸಹಾಯ ಮಾಡುತ್ತವೆ. "ರಾಜ್ಯ" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ 152 ಸಲ ಉಪಯೋಗಿಸಲ್ಪಟ್ಟಿದೆ, ಮತ್ತು "ರಾಜ್ಯಗಳು" ಎಂಬ ಪದವು 3ಸಲ ಉಪಯೋಗಿಸಲ್ಪಟ್ಟಿದೆ. ನೋಡಿರಿ. ಎಡ್ಡಿ ಕ್ಲೋಯೆರ್, *What Is "the Church"?* (Searcy, Ark.: Resource Publications, 1993), 187-213.

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಸಭೆಯು ಹೊಂದಿಕೊಂಡಿರುವ ಹಲವಾರು ಭಿನ್ನವಾದ ಲಕ್ಷಣಗಳನ್ನು ಯಾದಿ ಮಾಡಿರಿ. ಪ್ರತಿಯೊಂದು ಲಕ್ಷಣದ ಸಂಕ್ಷಿಪ್ತ ವಿವರಣೆ ಕೊಡಿರಿ.
2. ಸಭೆಯು ರಾಜ್ಯದಂತೆ ದೃಷ್ಟಿಸಲ್ಪಡಬೇಕೆಂದು ಪರಿಶುದ್ಧ ಬರಹದ ಯಾವ ವಚನಗಳು ಸೂಚಿಸುತ್ತವೆ?
3. ಹೊಸ ಒಡಂಬಡಿಕೆಯಲ್ಲಿ "ರಾಜ್ಯ" ಎಂಬ ಪದವು ಉಪಯೋಗಿಸಲ್ಪಟ್ಟ ಭಿನ್ನವಾದ ಸಂದರ್ಭಗಳನ್ನು ಯಾದಿ ಮಾಡಿರಿ.
4. ಸಭೆಯನ್ನು ಕುರಿತು ರಾಜ್ಯದ ಆತ್ಮಿಕ ಸ್ವಭಾವವು ಯಾವ ತೀರ್ಪುಗಳನ್ನು ಕೇಳುತ್ತದೆ? ತೀರ್ಪುಗಳನ್ನು ಯಾದಿ ಮಾಡಿರಿ ಮತ್ತು ಅವುಗಳನ್ನು ವಿವರಿಸಿರಿ.
5. ನಾವು ಒಂದು ಆತ್ಮಿಕ ರಾಜ್ಯದ ಭಾಗವಾಗಿದ್ದರೆ, ನೂತನ ಮೌಲ್ಯದ ಪದ್ಧತಿಯು ನಮಗೆ ಕೊಡಲ್ಪಟ್ಟಿದೆ. ಈ ಮೌಲ್ಯದ ಪದ್ಧತಿಯನ್ನು ಚರ್ಚಿಸಿರಿ.
6. ಹೊಸ ಒಡಂಬಡಿಕೆಯಲ್ಲಿ ಯಾವ ಎರಡು ನೀತಿಯ ವಿಧಗಳು ನಮೂದಿಲ್ಪಟ್ಟಿದೆ? ಪ್ರತಿಯೊಂದು ವಿಧವನ್ನು ವಿವರಿಸಿರಿ.
7. ದಾನಿಯೇಲ 2:44, ದೇವರು ಸ್ಥಾಪಿಸುವ ರಾಜ್ಯದ ನಿತ್ಯವಾದ ಸ್ವಭಾವವನ್ನು

ವ್ಯಕ್ತಪಡಿಸುತ್ತದೋ?

8. ದೇವರ ರಾಜ್ಯವು ಈಗ ಒಂದು ಅನುಭವ ಮತ್ತು ಭವಿಷ್ಯಕ್ಕಾಗಿ ಒಂದು ನಿರೀಕ್ಷೆ ಹೇಗೆ ಎಂಬುದನ್ನು ಚರ್ಚಿಸಿರಿ.
9. ನಿತ್ಯ ಜೀವವು ಇಲ್ಲಿ ಹೇಗೆ ವ್ಯಕ್ತಪಡಿಸಲ್ಪಡುತ್ತದೆ ಮತ್ತು ಅದು ನಿತ್ಯತ್ವದಲ್ಲಿ ಹೇಗೆ ವ್ಯಕ್ತಪಡಿಸಲ್ಪಡುತ್ತದೆ ಎಂಬುದನ್ನು ಚರ್ಚಿಸಿರಿ.
10. ಪರಲೋಕದಲ್ಲಿಯ ನಮ್ಮ ನಾಗರಿಕತ್ವವು ಇಂದು ನಮ್ಮ ಜೀವಿತಗಳಲ್ಲಿ ಯಾವುದನ್ನು ಅನ್ವಯಿಸುತ್ತದೆ?
11. ದೇವರ ರಾಜ್ಯವು ಹೇಗೆ ಪ್ರವೇಶಿಸಲ್ಪಡುತ್ತದೆ?
12. ಯೋಹಾನ 3:3, 5ನ್ನು ಅಪೊಸ್ತಲರ ಕೃತ್ಯಗಳು 2:38ರೊಂದಿಗೆ ಹೋಲಿಸಿರಿ.

© 2009 Truth for Today